approve it and then only we can take action and I assure my friend Mr. Basavaraj that I will see that it is processed very early by the Central Government also.

ಬರಪೀಡಿತ ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಪರಿಹಾರ ಕಾರ್ಯಕ್ರಮ.

447 (1929) ಶ್ರಿ ಎನ್. ಜಿ. ನಾಯ್ಕ (ಮೊಳಕಾಲ್ಮೂರು) :

ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ;-

ಅ) ಮೊಳಕಾಲ್ಮೂರು ತಾಲ್ಲೂಕು ಪದೇ ಪದೇ ಬರಗಾಲಕ್ಕೆ ತುತ್ತಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಪರಿಹಾರಕ್ಕಾಗಿ ಸರ್ಕಾರವು ಕೈಗೊಂಡಿರುವ ಕ್ರಮವೇನು ;

ಇ) ಹಾಗಿದ್ದರೆ ಯಾವಾಗ ಅದನ್ನು ಪ್ರಾರಂಭ ಮಾಡಲಾಗುವುದು ;

ಶ್ರಿ ಎಂ. ಮಲ್ಲಿಕಾರ್ಜುನ ಖರ್ಗೆ(ಕಂದಾಯ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):-

ಅ) ಹೌದು .

ಆ) ಈ ಪ್ರದೇಶದಲ್ಲಿ ಕುಡಿಯುವ ನೀರಿನ ಪೂರೈಕೆ ಮತ್ತು ಕೃಷಿ ಕಾರ್ಮಿಕರಿಗೆ ಉದ್ಯೋಗ ಒದಗಿಸುವ ಕಾರ್ಯಕ್ರಮಗಳನ್ನು ತೀವ್ರಗತಿಯಲ್ಲಿ ಪೂರೈಸಲಾಗಿದೆ.

ಇ) ಕಳೆದ ವರ್ಷ ನವಂಬರ್ ತಿಂಗಳವರೆಗೆ ಸಾಕಷ್ಟು ಮಳೆಯಾಗಿರುತ್ತದೆ; ಆದರೆ ಕುಡಿಯುನ ನೀರಿನ ತೀವ್ರ ಸಮಸ್ಯೆಯಿರುನ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ನಿವಾರಿಸಲು ಕೊಳವೆ ಬಾವಿಗಳನ್ನು ತೋಡಲು ಕ್ರಮ ಕೈಗೊಂಡಿದೆ.

ಶ್ರಿ ಎನ್. ಬಿ. ನಾಯಕ್:- ಸನ್ಮಾನ್ಯ ಅಧ್ಯಕ್ಷಿಣಿಯವರೇ, ಉತ್ತರವೇನೋ ಸನ್ಮಾನ್ಯ ಸಚಿವರಿಂದ ಬಂದಿದೆ. ನಾನು ಮೊಳಕಾಲ್ಮೂರು ತಾಲ್ಲೂಕು ಪದೇ ಪದೇ ಬರಗಾಲಕ್ಕೆ ತುತ್ತಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದರೆ ``ಹೌದು" ಎಂದು ಹೇಳಿದ್ದಾರೆ. ಸುಮಾರು ಹತ್ತಾರು ವರ್ಷಗಳಿಂದ ನಾನು ಮೂರು ಸಾರಿ ಈ ಸದನದಲ್ಲಿಯೇ ಇದನ್ನು ಕೇಳಿದ್ದೇನೆ, ಹೌದು ಎಂದು ಹೇಳಿದ್ದಾರೆ. ಹೌದು ಎಂದರೆ ಯಾವಾಗ ? ಅದಕ್ಕೆ ಏನಾದರೂ ಪರಿಹಾರವಿದೆಯೇ ? ಅದನ್ನು ಯಾವಾಗ ಮಾಡುತ್ತೀರಿ ಅದರ ಬಗ್ಗೆ ಸರ್ಕಾರದವರು ಉತ್ತರವನ್ನು ಹೇಳಬೇಕು.

ಶ್ರಿ ಎಂ. ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಅಧ್ಯಕ್ಷಿಣಿಯವರೇ, ಈಗ ಬರಗಾಲಕ್ಕೆ ಇದು ತುತ್ತಾಗುತ್ತಿದೆಯೇ ಎನ್ನತಕ್ಕಂಥ ಪ್ರಶ್ನೆಯನ್ನು ಕೇಳಿದಾಗ ಹೌದು ಎಂದು ಹೇಳಿದೆ. ಆದರೆ ಈಗ ನಮ್ಮ ಅಧೀನದಲ್ಲಿರತಕ್ಕಂಥ ಕೆಲವು ಕೆಲಸಕಾರ್ಯಗಳನ್ನು ಆಗಾಗ್ಗೆ ನಾವು ತೆಗೆದುಕೊಳ್ಳುತ್ತೇವೆ. ಉದಾಹರಣೆಗೆ ಡ್ರಿಂಕಿಂಗ್ ವಾಟರ್ ಸಮಸ್ಯೆ ಇದ್ದರೆ ಅದರ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು ಇದೆ ಮತ್ತು ಸ್ಕೇರ್‌ಸಿಟಿಯಲ್ಲಿ ಕೆಲಸ ತೆಗೆದುಕೊಳ್ಳತಕ್ಕಂಥದ್ದು ಇದೆ. ಈ ರೀತಿಯ ರಿಲೀಫ್ ಕೆಲಸಗಳನ್ನು ನಾವು ಮಾಡಬಹುದು . ಆದರೆ ಪರ್ಮನೆಂಟ್ ಡೆವಲಪ್‌ಮೆಂಟಲ್ ವರ್ಕ್ಸ್‌ನ್ನು ಮಾಡಲು ನೀರಾವರಿ ಇಲಾಖೆ ಇದೆ; ಮೈನರ್ ಇರಿಗೇಷನ್ ಡಿಪಾರ್ಟ್‌ಮೆಂಟ್ ಇದೆ , ಅಗ್ರಿಕಲ್ಚರ್ ಡಿಪಾರ್ಟ್‌ಮಂಟ್ ಇದೆ , ಸಾಯಿಲ್ ಕನ್ಸರ್ವೇಷನ್ ಇಲಾಖೆ ಇದೆ. ಈ ರೀತಿ ಇದ್ದರೂ ಕೂಡ ಜನ ತೊಂದರೆಯಲ್ಲಿದ್ದಾಗ ನಾವು ಆ ತಕ್ಷಣದಲ್ಲಿ ಸ್ವಲ್ಪ ರಿಲೀಫ್‌ನ್ನುಕೊಡುವುದಕ್ಕೆ ಕ್ರಮ ಕೈಗೊಳ್ಳುತ್ತೇವೆ ಮತ್ತು ಈ ಇಲಾಖೆಯು ಅವರ ಒಂದು ಸಹಾಯಕ್ಕಾಗಿ ಬರುತ್ತದೆ . ಆದರೆ ನಾನು ನಾಯಕರಲ್ಲಿ

ರಿಕ್ವೆಸ್ಟ್ ಮಾಡುವುದು ಏನೆಂದರೆ ಅಲ್ಲಿ ಏನಾದರೂ ಪರ್ಮನೆಂಟ್ ಡೆವಲಪ್‌ಮೆಂಟ್ ಮಾಡತಕ್ಕಂಥ ಯೋಜನೆಗಳು ಇದ್ದರೆ ನೀರಾವರಿ ಯೋಜನೆಯಾಗಲಿ ಈ ಕೆರೆಗಳನ್ನು ತಟ್ಟಿಸತಕ್ಕಂಥಾದ್ದಾಗಲಿ, ಡ್ಯಾಮ್‌ಗಳಾಗಲಿ ಇಂಥ ಎಲ್ಲಾ ಕೆಲಸಗಳಿಗೆ ಅವರು ಬಹುಶಃ ನೀರಾವರಿ ಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡಿ ಇದರ ಬಗ್ಗೆ ಒಂದು ಸೂಕ್ತವಾದಂಥ ಕ್ರಮವನ್ನು ತೆಗೆದುಕೊಂಡರೆ ಬಹುಶಃ ಅದು ಅವರಿಗೆ ಸಹಾಯವಾಗುತ್ತದೆ. ಆದರೆ ನನ್ನ ಇಲಾಖೆಯ ವತಿಯಿಂದ ಆ ನೀರಿನ ಸಮಸ್ಯೆಯಾಗಲೀ, ಬೇರೆ ಯಾವುದೇ ಇದ್ದರೂ ಕೂಡಾ ಸ್ಕೇರ್‌ಸಿಟಿಯಲ್ಲಿ ನಾನು ಸಹಾಯವನ್ನು ಮಾಡುತ್ತೇನೆ. ಈಗಾಗಲೇ 23 ಹಳ್ಳಿಗಳನ್ನು ಕ್ಯಾನಿಕಲ್ ಅಫೆಕ್ಟೆಡ್ ವಿಲೇಜಸ್ ಎಂದು ಹೇಳಿ ನಾವು ಗುರುತುಮಾಡಿದ್ದೇವೆ .ಅಂದರೆ ಅವರು ಪ್ರಶ್ನೆ ಕೇಳಿದ್ದು ಹೋದವರ್ಷ. ಆದರೆ ಹೋದವರ್ಷದಲ್ಲಿ ನಾವು 23 ಹಳ್ಳಿಗಳಿಗೆ ಈಗಾಗಲೇ ಸುಮಾರು 8,89,000 ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ, ಮತ್ತು ಒಂದು ಲಕ್ಷ ರೂಪಾಯಿಗಳನ್ನು ಈ ಎಂಪ್ಲಾಯ್‌ಮೆಂಟ್ ಜನರೇಷನ್‌ಗೆ ಹೀಗೆ ಸುಮಾರು ಹತ್ತು ಲಕ್ಷ ರೂಪಾಯಿಗಳನ್ನು ಆ ಕೆಲಸಕ್ಕೆ ನಾವು ಬಿಡುಗಡೆ ಮಾಡಿದ್ದೇವೆ . ಮತ್ತು ಜವಹರ್ ರೋಜಗಾರ್ ಯೋಜನೆಯಲ್ಲಿಯೂ ಕೂಡಾ ಸುಮಾರು 2 ಲಕ್ಷ 35ಸಾವಿರ ರೂಪಾಯಿಗಳನ್ನು ನಾವು ಬಿಡುಗಡೆ ಮಾಡಿದ್ದೇವೆ.

ಶ್ರೀ ಎನ್. ಜಿ . ನಾಯಕ್ :- ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ , ಸಚಿವರು ಹಣವನ್ನು ಬಿಡುಗಡೆ ಮಾಡಿದ್ದೇವೆ ಎಂದು ಹೇಳಿದರು. ನನ್ನ ಎರಡನೇ ಪ್ರಶ್ನೆಗೆ ಉತ್ತರವಾಗಿ ಕೃಷಿ ಕಾರ್ಮಿಕರಿಗೆ ಉದ್ಯೋಗ ಒದಗಿಸುವ ಕಾರ್ಯಕ್ರಮಗಳನ್ನು ತ್ವರಿತ ಗತಿಯಲ್ಲಿ ಮುಂದುವರಿಸಲಾಗಿದೆ ಎಂದು ಹೇಳಿ ಉತ್ತರವನ್ನು ಕೊಟ್ಟಿದ್ದಾರೆ. ಅಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳ ಇದೆ. ಬೋರ್‌ವೆಲ್‌ಗಳನ್ನು ತೆಗೆಸುವುದಕ್ಕೂ ನಮಗೆ ಅಧಿಕಾರ ಇಲ್ಲ. ಒಂದು ಬೋರ್‌ವೆಲ್ ಹಾಕಿಸುವುದಕ್ಕೂ ಎಂ . ಎಲ್.ಎ.ಗೆ ಆಗುತ್ತಿಲ್ಲ. ಆ ರೀತಿಯ ಪರಿಸ್ಥಿತಿಯಲ್ಲಿದ್ದೇವೆ, ನಾವು ಎಷ್ಟು ಹೇಳಿದರೂ ಮಾಡುವ ಹಾಗೆ ಇಲ್ಲ. ಇದುವರೆಗೂ ಈ ಅಧಿಕಾರ ಜಿಲ್ಲಾಪರಿಷತ್ತಿನಲ್ಲಿತ್ತು . ಈಗ ನಾನು ಕೇಳುತ್ತಿದ್ದೇನೆ. ಅಲ್ಲಿ ಸುಮಾರು ನಾಲ್ಕು ಸಾವಿರ ವ್ಯವಸಾಯ ಕಾರ್ಮಿಕರು ಇದ್ದಾರೆ. ಅವರೆಲ್ಲಾ ವಲಸೆ ಹೋಗುತ್ತಿದ್ದಾರೆ. ಅವರಿಗೆ ಇದುವರೆಗೂ ಏನು ಉದ್ಯೋಗವನ್ನು ಕೊಟ್ಟಿಲ್ಲ. ಅದಕ್ಕೋಸ್ಕರ ಮಾನ್ಯ ಮಂತ್ರಿಗಳು ಏನು ಉತ್ತರವನ್ನು ಕೊಡುತ್ತಾರೆಂದು ಕೇಳುತ್ತೇನೆ.

ಶ್ರೀ ಎಂ . ಮಲ್ಲಿಕಾರ್ಜುನ ಖರ್ಗೆ :- ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ಎಂ.ಎಲ್.ಎ.ಗಳು ಬೋರ್‌ವೆಲ್ ಅನ್ನು ಹಾಕುವುದಕ್ಕಾಗುವುದಿಲ್ಲ. ಪಿಹೆಚ್‌ಇ. ಎಕ್ಸಿಕ್ಯೂಟಿವ್ ಇಂಜಿನಿಯರ್‌ರವರಿಗೆ ಹೇಳಿ, ಜಿಲ್ಲಾ ಪರಿಷತ್ತಿನ ಎಕ್ಸಿಕ್ಯೂಟಿವ್ ಇಂಜಿನಿಯರ್‌ರವರಿಗೆ ಹೇಳಿ ನಾನು ವ್ಯವಸ್ಥೆಯನ್ನು ಮಾಡಿಸುತ್ತೇನೆ. ಆದರೆ ಅವರನ್ನು ಕರೆಸಿ ಜಿಲ್ಲಾಧಿಕಾರಿಗಳಿಗೆ ನಾನು ಆದೇಶವನ್ನು ಕೊಡುತ್ತೇನೆ ಇವರನ್ನು ಅಲ್ಲಿಗೆ ಕರೆಸಿ ಎಲ್ಲಿ ಕೆಲಸಗಳನ್ನು ಸ್ಕೇರ್‌ಸಿಟಿಯಲ್ಲಿ ತೆಗೆದುಕೊಳ್ಳಬಹುದು ಅಥವಾ ಯಾವ್ಯಾವ ಹಳ್ಳಿಯಲ್ಲಿ ಈಗಾಗಲೇ ನಾನು ಹೇಳಿದ ಹಾಗೆ 23 ಹಳ್ಳಿಗಳು ಅಫೆಕ್ಟೆಡ್ ವಿಲೇಜಸ್ ಇವೆ, ಅವನ್ನು ಬಿಟ್ಟು ಮತ್ತೆ ಯಾವುದಾದರೂ ಹಳ್ಳಿಗಳು ಇದ್ದರೆ ಅವರು ಜೊತೆಯಲ್ಲಿ ಚರ್ಚೆ ಮಾಡಿ ಡೆಪ್ಯುಟಿ ಕಮಿಷನರ್ ಮುಂದಿನ ಕ್ರಮವನ್ನು ತೆಗೆದುಕೊಳ್ಳಬೇಕು ಎನ್ನತಕ್ಕಂಥ ಆದೇಶವನ್ನು ಅವರಿಗೆ ನೀಡುತ್ತೇನೆ, ಮತ್ತು ನಾನು ಈಗಾಗಲೇ ಹೇಳಿದಂತೆ ಸುಮಾರು 12-13 ಲಕ್ಷ ರೂಪಾಯಿಗಳನ್ನು ನಾವು ಬಿಡುಗಡೆ ಮಾಡಿದ್ದೇವೆ. ಕುಡಿಯುವ ನೀರಿಗಾಗಿ ಸುಮಾರು 9 ,ಲಕ್ಷ ಎಂಪ್ಲಾಯ್‌ಮೆಂಟ್ ಜನರೇಷನ್‌ಗೆ ಒಂದು ಲಕ್ಷ ಜವಹರ್ ರೋಜ್‌ಗಾರ್ ಯೋಜನೆಗೆ ಸುಮಾರು ಎರಡೂವರೆ ,ಲಕ್ಷ ರೂಪಾಯಿಗಳನ್ನು ಈ ರೀತಿಯಾಗಿ ನಾವು ಹಣವನ್ನು ಬಿಡುಗಡೆ ಮಾಡಿದ್ದೇವೆ.

ಇನ್ನು ಎಲ್ಲಿ ಕುಡಿಯುವ ನೀರಿಗೆ ಅವಶ್ಯಕತೆ ಇದೆ. ಅಲ್ಲೆಲ್ಲಾ ಕೂಡ ಡೆಪ್ಯುಟಿ ಕಮೀಷನರ್‌ಮುಖಾಂತರ ನೀರಿನ ವ್ಯವಸ್ಥೆ ಮಾಡಿಸಿಕೊಡುತ್ತೇವೆಂದು ಹೇಳುತ್ತೇನೆ.

ಶ್ರೀ ಎನ್. ಜಿ. ನಾಯಕ್:- ಕುಡಿಯುವ ನೀರಿನದ್ದು ಆಯಿತು. ಇನ್ನು ಅವರಿಗೆ ಬೇರೆ ಏನು ಪರಿಹಾರ ಮಾಡುತ್ತೀರೆಂಬುದನ್ನು ನಾನು ಕೇಳುತ್ತಿದ್ದೇನೆ. ಅದಕ್ಕೆ ಉತ್ತರಕೊಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಇಲ್ಲಿಯವರಿಗೆ ಏನಾಗಿತ್ತು ಅಂದರೆ ಕೆಲವು ಕಾವುಗಾರಿಗಳಿಗೆ ಜಿಲ್ಲಾಪರಿಷತ್ತಿನಲ್ಲಿ ಇನ್ನು ಕೆಲಸ ಬಾಬಿನ ಹಣವನ್ನು ಸೆಪ್ಟೆಂಬರ್,ಅಕ್ಟೋಬರ್‌ನವರೆಗೂ ಬಿಡುಗಡೆ ಮಾಡಿರಲಿಲ್ಲ. ಆದರೆ ಮೊನ್ನೆ ಫೆಬ್ರವರಿಯಲ್ಲಿ ಸಾಕಷ್ಟು ಹಣವನ್ನು ನಾನು ರೂರಲ್ ಡೆವಲೆಪ್‌ಮೆಂಟ್‌ನಲ್ಲಿ ಬಿಡುಗಡೆ ಮಾಡಿದ್ದೇವೆ. ತಮ್ಮ ತಾಲ್ಲೂಕಿಗೂ ಸಾಕಷ್ಟು ಹಣವನ್ನು ಈ ಜವಹರ್ ರೋಜ್‌ಗಾರ್ ಯೋಜನೆಯಲ್ಲಾಗಲಿ, ಅಥವಾ ರೋಡ್ಸ್ ಬ್ರಿಡ್ಜ್‌ಗೂ ಬಿಡುಗಡೆ ಮಾಡಿದ್ದೇವೆ. ಈ ಹಣದ ಪ್ರಯೋಜನ ಈ ಸ್ಕೇರ್‌ಸಿಟಿ ಕೆಲಸದಲ್ಲಿ ಆಗುತ್ತದೆ ಎನ್ನತಕ್ಕ ಮಾತನ್ನು ಹೇಳುತ್ತೇನೆ.

ಶ್ರೀ ಎಂ. ವಿ. ವೆಂಕಟ್ಟಪ್ಪ:- ಜವಹರ್ ರೋಜ್‌ಗಾರ್ ಯೋಜನೆಯಲ್ಲಿ ಮಾನ್ಯ ಮಂತ್ರಿಗಳು ಹೇಳಿದ್ದರು. ಅಲ್ಲಿ ಏನಾಗಿದೆ ಅಂದರೆ ಸುಮಾರು ಕೋಟ್ಯಾಂತರ ರೂಪಾಯಿಗಳ ಬಿಲ್‌ಗಳು ಪೆಂಡಿಂಗ್ ಇದೆ ಎಂದು ಹೇಳಿ ಇಲ್ಲಿ ಹಣವನ್ನು ಬಿಡುಗಡೆ ಮಾಡುತ್ತಿಲ್ಲ. ಅದನ್ನು ಅಡ್ಜಸ್ಟ್ ಮಾಡಿಕೊಳ್ಳುವುದಕ್ಕೆ ಸೆಕ್ರೆಟರಿಗಳು ಲಡ್ಮಿನಿಸ್ಟ್ರೇಟರ್‌ಗಳು ತಯಾರಿದ್ದಾರಾ? ಅದರ ಬಗ್ಗೆ ಏನು ಕಾರ್ಯಕ್ರಮವನ್ನು ಕೈಗೊಂಡಿದ್ದೀರಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ತಾವು ಪ್ರತ್ಯೇಕವಾಗಿ ಆರ್. ಡಿ.ಪಿ.ಆರ್. ಮಿನಿಸ್ಟರ್ ಹತ್ತಿರ ಈ ಪ್ರಶ್ನೆಯನ್ನು ಕೇಳಿದರೆ ಅದಕ್ಕೆ ಅವರು ಉತ್ತರಕೊಡುತ್ತಾರೆ.

ಪಶುಸಂಗೊಪನಾ ಇಲಾಖೆಯಲ್ಲಿನ ಪರಿಶಿಷ್ಟ ಜಾತಿ/ವರ್ಗದ ಅಧಿಕಾರಿಗಳಿಗೆ ಬಡ್ತಿ.

448 (2198) ಶ್ರೀಮತಿ ಪೋಟಮ್ಮ (ಮೂಡಿಗೆರೆ)

ಪಶುಸಂಗೊಪನೆ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪಶುಸಂಗೋಪನಾ ಇಲಾಖೆಯಲ್ಲಿ ಸಹಾಯಕ ನಿರ್ದೇಶಕರ ಹುದ್ದೆಯಿಂದ ಉಪನಿರ್ದೇಶಕರ ಹುದ್ದೆಗೆ ರೋಸ್ಟರ್ ಅನ್ವಯ ಪರಿಶಿಷ್ಟ ಜಾತಿಗೆ ಮತ್ತು ವರ್ಗದ ಅಧಿಕಾರಿಗಳಿಗೆ ಬಡ್ತಿ ನೀಡುವ ಪ್ರಸ್ತಾವ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಪ್ರಸ್ತಾವನೆ ಬಂದಿದ್ದಲ್ಲಿ ಇನ್ನೂ ಬಡ್ತಿ ನೀಡದೇ ಇರುವುದಕ್ಕೆ ಕಾರಣಗಳೇನು?

ಶ್ರೀ ಬಸವರಾಜ್ ಪಾಟೀಲ್ (ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ಸಚಿವರು):-

ಅ) ಸಹಾಯಕ ನಿರ್ದೇಶಕರ ಹುದ್ದೆಯಿಂದ ಉಪನಿರ್ದೇಶಕರ ಹುದ್ದೆಗೆ ರೋಸ್ಟರ್ ಪದ್ಧತಿಯ ಮೇಲೆ ಬಡ್ತಿ ನೀಡುವುದು ಪರಿಶೀಲನೆಯಲ್ಲಿದೆ. ಇನ್ನೂ ಅಂತಿಮ ತೀರ್ಮಾನ ತೆಗೆದುಕೊಂಡಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀಮತಿ ಪೋಟಮ್ಮ:- ಮಾನ್ಯ ಮಂತ್ರಿಗಳು ನನ್ನ ಪ್ರಶ್ನೆಗೆ ಉತ್ತರವಾಗಿ ಇದು ಇನ್ನೂ ಅಂತಿಮ ತೀರ್ಮಾನವನ್ನು ತೆಗೆದುಕೊಂಡಿಲ್ಲ ಅಂತ ಹೇಳುತ್ತಾರೆ. ಇದು ಎಷ್ಟು ವರ್ಷದಿಂದ ಸರ್ಕಾರದ ಪರಿಶೀಲನೆಯಲ್ಲಿದೆ? ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಿಕ್ಕೆ ಇನ್ನು ಎಷ್ಟು ತಿಂಗಳುಗಳು ಬೇಕೆನ್ನುವುದನ್ನು ಸ್ಪಷ್ಟಪಡಿಸಬೇಕು.